| | |
|---|---|
| **JAIN COLLEGE** V V Puram<br><br>**II PUC Mock Question Paper 1 – JAN-2025** | **Course:** II year PUC<br>**Subject:** Kannada<br>**Max. Marks:** 80 (ಒಟ್ಟು 56 ಪ್ರಶ್ನೆಗಳು)<br>**Duration:** 3 hours |

**ಸೂಚನೆ: 1. ಪ್ರಶ್ನೆಪತ್ರಿಕೆಯ ಮೇಲೆ ಏನನ್ನೂ ಬರೆಯಬಾರದು.**
**2. ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಬೇಕು.**
**3.“ಅ” ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

## ‘ ಅ ’ ವಿಭಾಗ

**(ಅ) ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 10x1=10**

1. ಮಯತನೂಜೆ ಎಂದರೆ ಯಾರು?
   ಅ) ಸೀತೆ ಆ) ಮಂಡೋದರಿ ಇ) ಖಚರ ಕಾಂತೆಯರು ಈ) ಬಹುರೂಪಿಣಿ
2. ಗುರು ಹೇಗೆ ವರ್ತಿಸಬಾರದು?
   ಅ) ಶಿಷ್ಯರಾಗಿ ಆ) ಕೆಟ್ಟವರಾಗಿ ಇ) ಲಘುವಾಗಿ ಈ) ಜಂಗಮರಂತೆ
3. ಅರಸಿ ಬಿಡು ಬಿಡು ಖಾತಿಯನು ವಿಸ್ತರಿಸಲೇಕೆಮ್ಮಣ್ಣನಾಜ್ಞೆಯ ಗೆರೆಯ ದಾಂಟಿದೆ ದಾಂಟಿದೆನು ಹೋಗೆಂದನಾ ಭೀಮ ------ ಈ ಸಾಲುಗಳಲ್ಲಿ ಭೀಮ ಹೇಳಿರುವುದು -
   ಅ) ಅಣ್ಣನ ಮಾತನ್ನು ಮೀರುವುದಿಲ್ಲ ಎಂದು
   ಆ) ಅಣ್ಣನು ಆಜ್ಞೆ ಮಾಡಿದರೆ ಕಾಪಾಡುವೆನು ಎಂದು
   ಇ) ಅಣ್ಣನ ಮಾತನ್ನು ಮೀರುವೆನೆಂದು
   ಈ) ಅಣ್ಣನ ಒಪ್ಪಿಗೆಯನ್ನು ಪಡೆದು ಬಾ ಎಂದು
4. ತೈಲ ತೀರಿದ್ದು ಹೇಗೆ ತಿಳಿಯುತ್ತದೆ?
   ಅ) ದೀಪ ಉರಿದ ಮೇಲೆ ಆ) ದೀಪ ಹಚ್ಚಿದ ಮೇಲೆ ಇ) ದೀಪ ಆರಿದ ಮೇಲೆಈ) ಬತ್ತಿ ಹಾಕಿದ ಮೇಲೆ
5. ಜನರಿಗೆ ಯಾವುದಕ್ಕೆ ಗತಿಯಿಲ್ಲ?
   ಅ)ಒಂದು ಹೊತ್ತು ಊಟಕ್ಕೆ ಆ) ನೀರಿಗೆ ಇ) ಗಂಜಿಗೆ ಈ) ಹಣಕ್ಕೆ
6. ಮಾರ್ಷ್ ವಾಲ್ಪರೈಗೆ ಬಂದುದು ಯಾವಾಗ?
   ಅ) 1980 ಆ) 1880 ಇ) 1990 ಈ) 1890
7. ಏನ್ ಮಾಡೋಕಾಗುತ್ತೆ? ಎಲ್ಲಾ ಹಣೆ ಬರಹ, ಆಗೋದು ಆಗೇ ಆಗುತ್ತೆ ಎಂದಾಗೆಲ್ಲ ನನಗೆ ರೇಗಿ ಹೋಗುತ್ತದೆ. ನಿಜ, ಕೆಲವೊಮ್ಮೆ ಆಗುವುದನ್ನು ತಡೆಯಲು ಆಗದಿರಬಹುದು. ಆದರೆ ಪ್ರಯತ್ನಿಸಬಹುದಲ್ಲ. ‘ಅದೃಷ್ಟ’ವನ್ನೇ ಅವಲಂಬಿಸಿ ಬದುಕಲು ಸಾಧ್ಯವೆ? ------ ಲೇಖಕರ ಈ ಮಾತಿನಲ್ಲಿ ಅಡಗಿರುವ ವಿಚಾರ-
   ಅ) ಅದೃಷ್ಟವನ್ನೇ ನಂಬಿ ಬದುಕಬೇಕು ಆ) ಹಣೆಬರಹದಂತೆಯೇ ಜೀವನ ನಡೆಯುತ್ತದೆ
   ಇ) ಅದೃಷ್ಟವನ್ನೇ ನಂಬಬಾರದು ಈ) ಅದೃಷ್ಟದ ಬಗ್ಗೆ ಲೇಖಕರಿಗೆ ಇರುವ ಸಂದೇಹ
8. ಶಿವೇಗೌಡರು ರಾತ್ರೋ ರಾತ್ರಿ ಆನೆ ಕರೆದುಕೊಂಡು ಹೋದುದ್ದೇಕೆ?
   ಅ) ಗಂಧದಮರ ಸಾಗಿಸಲು ಆ) ಕಳ್ಳನಾಟ ತುಂಬಿಸಲು
   ಇ) ಕಳ್ಳನಾಟ ಇಳಿಸಲು ಈ) ಆನೆಯ ಮೇಲೆ ಆರೋಪ ಹೊರಿಸಲು

9. ಆ ಆನೆಗೆ ಹೆಂಡ ಕುಡಿಸಿದರೆ ಹೇಗಾಗಬಹುದು ಹೇಳಿ. ಮಕ್ಕಳೂ ಮರಿ ಓಡಾಡೋ ಜಾಗದಲ್ಲಿ ಓಡಾಡುತ್ತದೆ. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ. ನಮ್ಮಂತೋರು ನಮಃಶಿವಾಯ ಅನ್ನೋದಕ್ಕೆ----ದುರ್ಗಪ್ಪನ ಈಮಾತುಗಳಲ್ಲಿ ವ್ಯಕ್ತವಾಗುತ್ತಿರುವುದು----
   ಅ) ಆನೆಯ ಬಗ್ಗೆ ಅನುಕಂಪ ಆ) ಆನೆಯ ಬಗ್ಗೆ ಭಯ
   ಇ) ಆನೆಯ ಬಗ್ಗೆ ಕೋಪ ಈ) ಆನೆಯ ಬಗ್ಗೆ ಪ್ರೀತಿ

10. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?
   ಅ) ಕಾಡಿನಲ್ಲಿ ಆ) ಜೀಪಿನಲ್ಲಿ ಇ) ಶಿಕಾರಿ ಗಂಡಿಯಲ್ಲಿ ಈ) ಕೃಷ್ಣೇಗೌಡರ ತೋಟದಲ್ಲಿ

**(ಆ) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **5 x 1=5**

(ಹೆಡ್ ಮಾಸ್ತರರ, ವಾತ್ಸಾಯನ , ಮುದ್ದಣ, ಭಾಷೆಯನ್ನು, ಬೆಳ್ಳಿಲೋಟ, ಅಣ್ಣಾಮಲೈ)

11. ಬದುಕು ------------------ ಬಿಟ್ಟು ಇರುವುದಿಲ್ಲ.
12. ಧಣಿಗಳ ದಾಂಪತ್ಯಕ್ಕೆ----------------- ಮೂಕಸಾಕ್ಷಿಯಾಗಿತ್ತು.
13. ಕಲಾಂ ಅವರು ------------- ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು .
14. ಶೇಷನು ರಾಮಾಯಣದ ಕತೆಯನ್ನು --------- ನಿಗೆ ಹೇಳಿದನು.
15. ---------------- ಬಗ್ಗೆ ಮೂಕರ್ಜಿಯ ದೂರನ್ನು ಹಳ್ಳಿಗರು ಕೊಡುತ್ತಾರೆ.

(ಇ) **ಹೊಂದಿಸಿ ಬರೆಯಿರಿ.** **5 x 1 = 5**

| ಅ | | ಬ |
|---|---|---|
| 16. | ಪಗೆಯಂ ಬಾಲಕನೆಂಬರೇ | ಅ) ದ.ರಾ. ಬೇಂದ್ರೆ |
| 17. | ಪುರಂದರ ದಾಸರು | ಆ) ಶಿಲುಬೆಯೇರಿದ್ದಾನೆ |
| 18. | ಮುಕ್ತಕಂಠ | ಇ) ಸೋಮೇಶ್ವರ ಶತಕ |
| 19. | ವ್ಯಕ್ತಿಪರ ಕವನಗಳು | ಈ) ಸುಕನ್ಯಾ ಮಾರುತಿ |
| 20. | ಪ್ರೊ. ಟಿ. ಯಲ್ಲಪ್ಪ | ಉ) ಕೀರ್ತನ ಸಾಹಿತ್ಯ |
| | - | ಊ) ಚಿಟ್ಟೆ ಮತ್ತು ಜೀವಯಾನ |

## ಆ – ವಿಭಾಗ

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3 x 2 = 6**

21. ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?
22. ಗಂಡರೈವರು ಮೂರು ಲೋಕದ ಗಂಡರಾರು? ಹೆಸರಿಸಿ.
23. ಬೆಳಕು - ಬೇಟೆಗಾರ ಹೇಗೆ ಬರುತ್ತಾನೆ?
24. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2 x 2 = 4**

25. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು.?
26. ಕೇಂದ್ರದ ರೈಲು, ಅಂಚೆ ಇಲಾಖೆಗಳು ಯಾವ ಧೋರಣೆ ಬೆಳೆಸಿಕೊಂಡಿವೆ?
27. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?
28. ಗಿಡ್ಡ ಮಾಸ್ತರು ಶಾಲೆಯಲ್ಲಿ ಹುಡುಗರಿಗೆ ಏಕೆ ಹೊಡೆಯುತ್ತಾರೆ?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 3 x 2 =6**

29. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
30. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?
31. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?
32. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ – ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ , ಸ್ವಾರಸ್ಯ ಬರೆಯಿರಿ. 2 x 3 = 6**

33. ಚೇಳ್ ಚಿಕ್ಕದೆಂದಳ್ಕರಿಂ ತೆಗೆಯಲ್ ಕಚ್ಚದೇ.
34. ಜ್ಯೋತಿ ನಿನ್ಯಾರ ಹೋಲರ.
35. ಬಿಡುಗಡೆಗೆ ಹಾತೊರೆದು ರೈಟನ್ನೇ ರಾಂಗೆಂದಳೋ.

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ಯಾರಸ್ಯಬರೆಯಿರಿ. 1 x 3 = 3**

36. ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು.
37. ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು .

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ಯಾರಸ್ಯ ಬರೆಯಿರಿ. 1 x 3 = 3**

38. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ.
39. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

## ಈ – ವಿಭಾಗ

**(ಅ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2 x 4 = 8**

40. 'ಕದಡಿದ ಸಲಿಲಂ ತಿಳಿವಂದದೆ ' – ಕಾವ್ಯಭಾಗದಲ್ಲಿ ಕಂಡುಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ, ನಿಮ್ಮ ಮಾತುಗಳಲ್ಲಿ ಉತ್ತರಿಸಿರಿ.
41. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?
42. ಮಗು ಕಲಿತದ್ದನ್ನು ಮತ್ತು ವಿದ್ಯಾಭ್ಯಾಸ ಮಾಡುವ ವಿವರಗಳನ್ನುವಿಶ್ಲೇಷಿಸಿ.
43. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕರ
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದಲ್ಲಿ ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?
ಮರ್ಕಟನ ಕೈಯಲ್ಲಿ ಮಾಣಿಕವಿದ್ದು ಫಲವೇನು?
ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ
ಲಿಂಗವಿದ್ದು ಫಲವೇನು? ಶಿವಪಥವನರಿಯದನ್ನಕ್ಕ.

(ಅ) ಯಾರ ಕೈಯಲ್ಲಿ ಚಂದ್ರಾಯುಧವಿದ್ದು ಫಲವಿಲ್ಲ? (1 ಅಂಕ)
(ಆ) ಯಾರ ಕೈಯಲ್ಲಿ ಮಾಣಿಕವಿದ್ದು ಫಲವಿಲ್ಲ? (1 ಅಂಕ)
(ಇ) ಈ ವಚನದ ಸ್ವಾರಸ್ಯವೇನು ? (2 ಅಂಕಗಳು)

**(ಆ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1 x 4 = 4**

44. ಬಸಲಿಂಗನಿಗೆ ಸಿಟ್ಟು ಬರಲು ಕಾರಣವೇನು? ಅದನ್ನು ಆತ ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ?
45. ಅಂತರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್ಪರೈಗೆ ಒದಗಿದ ಸಮಸ್ಯೆಗಳೇನು?
46. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

**(ಇ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1 x 4 = 4**

47. ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿಹೋಗಲು ಕಾರಣಗಳೇನು?
48. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

## ಉ - ವಿಭಾಗ
## ಭಾಷಾಭ್ಯಾಸ

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 4 x 2 = 8**

49. ಯಾವುದಾದರೂ ಎರಡು ಪದಗಳ ನಾನಾರ್ಥ ಬರೆಯಿರಿ.
    ೧. ಭಾವ ೨. ಕವಿ ೩. ಉತ್ತರ
50. ಯಾವುದಾದರೂ ಎರಡು ನುಡಿಗಟ್ಟುಗಳಿಂದ ವಾಕ್ಯ ರಚಿಸಿ.
    ೧. ಗಾಳಿಸುದ್ದಿ ೨. ಕಣ್ಣು ಕೆಂಪಗೆ ಮಾಡು ೩. ಕೈ ಬೆಚ್ಚಗೆ ಮಾಡು
51. ಯಾವುದಾದರೂ ಎರಡು ಪದಗಳ ತದ್ಭವ ರೂಪ ಬರೆಯಿರಿ.
    ೧. ಯೋಗಿ ೨. ಸಂಸ್ಥಾ ೩. ದಿಟ್ಟಿ
52. ಯಾವುದಾದರೂ ಎರಡು ಪದಗಳ ಧಾತು ರೂಪ ಬರೆಯಿರಿ.
    ೧. ನಿಂತರು ೨. ಕೇಳುವರು ೩. ಹೋಯಿತು
53. ಯಾವುದಾದರೂ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.
    ೧. ಸಲಿಲಂ ೨. ರಾಮನಿಂ ೩. ಸೀತೆಯತ್ತಣಿಂ
54. ಯಾವುದಾದರು ಎರಡು ಪದಗಳ ನಿಷೇಧರೂಪ ಬರೆಯಿರಿ.
    ೧. ಆಡಿತು ೨. ಮರೆಯುವೆ ೩. ತರುವರು

**(ಆ) ಇವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 x 4 = 4**

55. ರಕ್ತದಾನ ಮತ್ತು ನೇತ್ರದಾನಗಳ ಮಹತ್ವ
    ಅಥವಾ
    ಹೆಚ್ಚುತ್ತಿರುವ ವೃದ್ಧಾಶ್ರಮಗಳು

**ಇ) ಇವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ. 1 x 4 = 4**

56. ಆನಂದ್/ ಲಾವಣ್ಯ, ದ್ವಿತೀಯ ಪಿ.ಯು.ಸಿ. ಮಹಾರಾಣಿ ಅಮ್ಮಣ್ಣಿ ಪದವಿ ಪೂರ್ವ ಕಾಲೇಜು, ಮಲ್ಲೇಶ್ವರ, ಬೆಂಗಳೂರು. – ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ದೀಕ್ಷ/ ಪ್ರನೀಲ್, ನಂ.8, 3ನೇ ಅಡ್ಡರಸ್ತೆ, ಮಲ್ಪೆ, ಮಂಗಳೂರು, ಈ ವಿಳಾಸದಲ್ಲಿ ವಾಸವಾಗಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಅಂತಿಮ ಪರೀಕ್ಷೆಯ ಸಿದ್ಧತೆಗಳ ಬಗ್ಗೆ ಪತ್ರ ಬರೆಯಿರಿ.

ಅಥವಾ

ಸ್ಫಟಿಕ / ಸಚಿನ್ , ನಂ.2, 3ನೇ ಮುಖ್ಯರಸ್ತೆ, ಗೊರೂರು, ಹಾಸನ ಜಿಲ್ಲೆ. ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ನಿಮ್ಮ ಬಡಾವಣೆಗೆ ಬೇಕಾದ ಸೂಕ್ತ ಬಸ್ ಸಂಪರ್ಕಕ್ಕಾಗಿ ನಿರ್ದೇಶಕರು , ಹಾಸನ ಸಾರಿಗೆ ಸಂಸ್ಥೆ, ಹಾಸನ, ಇವರಿಗೆ ಮನವಿ ಪತ್ರ ಬರೆಯಿರಿ.

***